ಏನೆಂದರೆ, ಬೇರೆ ರಾಜ್ಯದಲ್ಲಿ ಕೊಟ್ಟಿದ್ದಾರೆ, ಅದೇ ರೀತಿ ನೀವು ಏಕೆ ಕೊಡಬಾರದು ಎಂದು ಹೇಳುತ್ತಿದ್ದೇವೆ. ನೀವು ಹೇಳುತ್ತಿರುವುದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಎಸ್.ಎ.ರವೀಂದ್ರನಾಥ್ : ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ.

ಅಪೆಕ್ಸ್ ಬ್ಯಾಂಕ್‌ಗಳ ಸಾಲಗಳ ಬಗ್ಗೆ

60(411) ಶ್ರೀ ಸಿ.ಎಸ್.ಪುಟ್ಟೇಗೌಡ (ಶ್ರವಣ ಬೆಳಗೊಳ)

ಅ) ಕಳೆದ ಮೂರು ವರ್ಷಗಳಲ್ಲಿ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿಯಮಿತದವರು ಯಾವ ಯಾವ ಸಹಕಾರಿ ಮತ್ತು ಸಹಕಾರೇತರ ಸಕ್ಕರೆ ಕಾರ್ಖಾನೆಗಳಿಗೆ ಸಾಲ ನೀಡಲಾಗಿದೆ ಹಾಗೂ ಬ್ಯಾಂಕಿನ ಪದಾಧಿಕಾರಿಗಳ ಸಂಬಂಧಿಕರು ಆಡಳಿತ ಮಂಡಳಿಯಲ್ಲಿರುವ ಸಕ್ಕರೆ ಕಾರ್ಖಾನೆಗಳಿಗೆ ಸಾಲ ಕೊಡಲಾಗಿದೆಯೇ? ಹಾಗಿದ್ದಲ್ಲಿ, ಸಾಲ ಮಂಜೂರಾತಿ ನಿಯಮಗಳನ್ನು ಪಾಲಿಸಲಾಗಿದೆಯೇ?

ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ., ಇದು ಈ ಕೆಳಕಂಡ ಸಹಕಾರಿ ಮತ್ತು ಸಹಕಾರೇತರ ಸಕ್ಕೆರೆ ಕಾರ್ಖಾನೆಗಳಿಗೆ ಸಾಲ ನೀಡಿರುತ್ತದೆ.

ವರ್ಷ	ಸಹಕಾರಿ ಸಕ್ಕರೆ ಕಾರ್ಖಾನೆ	ಸಹಕಾರೇತರ ಸಕ್ಕರೆ ಕಾರ್ಖಾನೆ
2005–06	1) ಕೃಷ್ಣಾ ಸ.ಸ.ಕಾ. 2) ಮಹಾತ್ಮಾಗಾಂಧಿ ಸ.ಸ.ಕಾ 3) ಘಟಪ್ರಭಾ ಸ.ಸ.ಕಾ 4) ಹಿರಣ್ಯಕೇಶಿ ಸ.ಸ.ಕಾ	1) ಮೈಸೂರ್ ಶುಗರ್ಸ 2) ಪ್ರಭುಲಿಂಗೇಶ್ವರ ಶುಗರ್ಸ್ ನಿ. 3) ಜಮಖಂಡಿ ಶುಗರ್ಸ್ ನಿ. 4) ಬೀಳಗಿ ಶುಗರ್ಸ್ ನಿ. 5) ಜೆಮ್ ಶುಗರ್ಸ್ 6) ಬಾದಾಮಿ ಶುಗರ್ಸ್ ನಿ.
2006–07	1) ಧನಲಕ್ಷ್ಮಿ ಸ.ಸ.ಕಾ.ನಿ. 2) ಸೋಮೇಶ್ವರ ಸ.ಸ.ಕಾ. 3) ಘಟಪ್ರಭಾ ಸ.ಸ.ಕಾ. 4) ಮಹಾತ್ಮಾಗಾಂಧಿ ಸ.ಸ.ಕಾ. 5) ನಾರಂಜಾ ಸ.ಸ.ಕಾ. 6) ಹಾಲುಸಿದ್ಧನಾಥ ಸ.ಸ.ಕಾ.	1) ಬೀಳಗಿ ಶುಗರ್ಸ್ ನಿ. 2) ನಿರಾಣಿ ಶುಗರ್ಸ್ ನಿ. 3) ಪ್ರಭುಲಿಂಗೇಶ್ವರ ಶುಗರ್ಸ್ ಅಂಡ್ ಕೆಮಿಕಲ್ಸ್ ನಿ. 4) ಜಮಖಂಡಿ ಶುಗರ್ಸ್ ನಿ. 5) ಬಾದಾಮಿ ಶುಗರ್ಸ್ ನಿ. 6) ಜೆಮ್ ಶುಗರ್ಸ್
2007–08	1) ಕೃಷ್ಣಾ ಸ.ಸ.ಕಾ 2) ಮಾರ್ಕಂಡೇಯ ಸ.ಸ.ಕಾ.	1) ಪ್ರಭುಲಿಂಗೇಶ್ವರ ಶುಗರ್ಸ್ ಅಂಡ್ ಕೆಮಿಕಲ್ಸ್ ನಿ. 2) ಜಮಖಂಡಿ ಶುಗರ್ಸ್ ನಿ. 3) ಬೀಳಗಿ ಶುಗರ್ಸ್ ನಿ. 4) ಜೆಮ್ ಶುಗರ್ಸ್

ಅಪೆಕ್ಸ್ ಬ್ಯಾಂಕಿನ ಪದಾಧಿಕಾರಿಗಳ ಸಂಬಂಧಿಕರನ್ನು ಆಡಳಿತ ಮಂಡಳಿಯಲ್ಲಿ ಇರುವ ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ಸಾಲ ಕೊಟ್ಟಿರುವುದಿಲ್ಲ.

ಆ) ಮೇಲ್ಕಂಡ ಸಹಕಾರ ಮತ್ತು ಸಹಕಾರೇತರ ಸಕ್ಕರೆ ಕಾರ್ಖಾನೆಗಳು ಪಡೆದ ಸಾಲಗಳು ಸಮರ್ಪಕವಾಗಿ ಉಪಯೋಗವಾಗಿ ಸಹಕಾರಿ ಅಪೆಕ್ಸ್ ಬ್ಯಾಂಕಿಗೆ ಮರುಪಾವತಿಯಾಗಿದೆಯೇ?

ಕಳೆದ ಮೂರು ವರ್ಷಗಳಲ್ಲಿ ಅಪೆಕ್ಸ್ ಬ್ಯಾಂಕಿನಿಂದ ಒಟ್ಟು 28 ಸಕ್ಕರೆ ಕಾರ್ಖಾನೆಗಳು ಸಾಲ ಪಡೆದಿದ್ದು ಎಲ್ಲಾ ಕಾರ್ಖಾನೆಗಳು ಪಡೆದ ಸಾಲಗಳನ್ನು ಸಮರ್ಪಕವಾಗಿ ಉಪಯೋಗಿಸಿಕೊಂಡಿವೆ. ಈ ಪೈಕಿ ಸೋಮೇಶ್ವರ ಮತ್ತು ಘಟಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆ, ಮೈಸೂರ್ ಶುಗರ್ಸ್ ಹಾಗೂ ಬೀಳಗಿ ಶುಗರ್ಸ್ ಹೊರತುಪಡಿಸಿ ಉಳಿದ ಕಾರ್ಖಾನೆಗಳು ಕಾಲಕಾಲಕ್ಕೆ ಸಾಲ ಮರುಪಾವತಿಸುತ್ತಿವೆ.

ಇ) ಸಹಕಾರ ಮತ್ತು ಸಹಕಾರೇತರ ಸಕ್ಕರೆ ಕಾರ್ಖಾನೆಗಳ ಸಾಲಗಳು ಮರುಪಾವತಿ ಆಗದೇ ಸಹಕಾರಿ ಅಪೆಕ್ಸ್ ಬ್ಯಾಂಕಿಗೆ ಸುಸ್ತಿಯಾಗಿದೆಯೇ? ವಿವರ ನೀಡುವುದು.

ಪ್ರಾರಂಭದಿಂದಲೂ ಕೆಲವು ಸಹಕಾರ ಮತ್ತು ಸಹಕಾರೇತರ ಸಕ್ಕರೆ ಕಾರ್ಖಾನೆಗಳ ಸಾಲಗಳು ಮರುಪಾವತಿಯಾಗದೇ ಸುಸ್ತಿಯಾಗಿದ್ದು ಅವುಗಳ ವಿವರ ಕೆಳಕಂಡಂತಿದೆ.

ವಿವರ	ಸಂಖ್ಯೆ	ಮೊತ್ತ (ಲಕ್ಷಗಳಲ್ಲಿ)
ಸಹಕಾರಿ ಸಕ್ಕರೆ ಕಾರ್ಖಾನೆಗಳು	16	8143.48
ಸಹಕಾರೇತರ ಸಕ್ಕರೆ ಕಾರ್ಖಾನೆಗಳು	06	2744.20
ಒಟ್ಟು	22	10887.68

ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಈ) ಕಳೆದ ಮೂರು ವರ್ಷಗಳಲ್ಲಿ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿಯಮಿತದ ವ್ಯವಹಾರಗಳಿಗೆ ಸಂಬಂಧಿಸಿದಂತೆ ಸಹಕಾರಿ ಕಾಯ್ದೆ ಕಲಂ 64ರ ವಿಚಾರಣೆ ಅಥವಾ ಕಲಂ 65ರ ತನಿಖೆ ಅಥವಾ ಯಾವುದಾದರೂ ಇಲಾಖಾ ತನಿಖೆ ವಿಚಾರಣೆ ಮಾಡಲಾಗಿದೆಯೇ? ಹಾಗಿದ್ದಲ್ಲಿ, ವಿವರ ನೀಡುವುದು.

ಇಲ್ಲ.

LCD. VS. 80

<u>ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಪುಟ್ಟೇಗೌಡ ಸಿ.ಎಸ್. ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 411 ಕ್ಕೆ ಅನುಬಂಧ</u>

ಸಹಕಾರ ಮತ್ತು ಸಹಕಾರೇತರ ಸಕ್ಕರೆ ಕಾರ್ಖಾನೆಗಳ ಸಾಲಗಳು ಮರುಪಾವತಿ ಆಗದೇ ಸಹಕಾರಿ ಅಪೆಕ್ಸ್ ಬ್ಯಾಂಕಿಗೆ ಸುಸ್ತಿಯಾಗಿರುವ ವಿವರಗಳು (ದಿ: 20.02.2009 ರಲ್ಲಿದ್ದಂತೆ)

ದುಡಿಯುವ ಬಂಡವಾಳ ಸಾಲ

ಕ್ರ ಸಂ.	ಸಕ್ಕರೆ ಕಾರ್ಖಾನೆಯ ಹೆಸರು	ಮಂಜೂರಾದ ಮಿತಿ (ರೂ.ಲಕ್ಷಗಳಲ್ಲಿ)	ಮಂಜೂರಾದ ದಿನಾಂಕ	ಸುಸ್ತಿಯಾಗಿರುವ ಮೊತ್ತ (ರೂ.ಲಕ್ಷಗಳಲ್ಲಿ)	ಸುಸ್ತಿಯಾದ ದಿನಾಂಕ)
ಸಹಕಾರಿ ಸಕ್ಕರೆ ಕಾರ್ಖಾನೆಗಳು					
1.	ಪಾಂಡವಪುರ ಸಸಕಾ. ಪಾಂಡವಪುರ	550.00	20.11.2002	523.59	30.09.2003
2.	ಭದ್ರಾ ಸಸಕಾ. ದೊಡ್ಡಬಾತಿ	1300.00	01.10.2002	928.87	30.09.2003
3.	ಕರ್ನಾಟಕ ಸಸಕಾ. ಹಾವೇರಿ	900.00	02.12.2002	904.01	30.09.2003
4.	ವಾಣಿವಿಲಾಸ ಸಸಕಾ. ಹಿರಿಯೂರು	450.00	20.12.2007	447.05	20.12.2007
5.	ಭಾಗ್ಯಲಕ್ಷ್ಮಿ ಸಸಕಾ. ಖಾನಾಪುರ	1694.00	14.12.2000	969.21	30.09.2001
		2500.00	18.10.2007	746.65	18.10.2007
6.	ಘಟಪ್ರಭಾ ಸಸಕಾ. ಗೋಕಾಕ	1212.05	01.10.2006	1147.16	30.09.2007
7.	ಬೀದರ್ ಸಸಕಾ. ಹಳ್ಳಿಖೇಡ್	500.00	08.02.2005	409.83	15.06.2005
8.	ನಾರಂಜಾ ಸಸಕಾ. ಇಮಾಮಂಪುರ	1300.00	29.03.2007	238.24	31.03.2008
9.	ಹಾಲಸಿದ್ದನಾಥ ಸಸಕಾ.	500.00	29.03.2007	19.22	31.03.2008
ಸಹಕಾರೇತರ ಸಕ್ಕರೆ ಕಾರ್ಖಾನೆಗಳು					
10.	ಮೈಸೂರು ಶುಗರ್ ಕಂಪನಿ ನಿಯಮಿತ,	450.00	15.11.2003	206.64	30.09.2004
			25.06.2001		31.12.20

	ಮಂಡ್ಯ	400.00		300.00	01
	ಒಟ್ಟು(ನಗದುಸಾಲ)	**11956.05**		**6840.47**	

ಅವಧಿ ಸಾಲಗಳು

ಕ್ರ. ಸಂ.	ಸಕ್ಕರೆ ಕಾರ್ಖಾನೆಯ ಹೆಸರು	ಮಂಜೂರಾದ ಮಿತಿ (ರೂ.ಲಕ್ಷಗಳಲ್ಲಿ)	ಮಂಜೂರಾದ ದಿನಾಂಕ	ಸುಸ್ತಿಯಾಗಿರಾದ ಮೊತ್ತ (ರೂ.ಲಕ್ಷಗಳಲ್ಲಿ)	ಸುಸ್ತಿಯಾದ ದಿನಾಂಕ
ಸಹಕಾರಿ ಸಕ್ಕರೆ ಕಾರ್ಖಾನೆಗಳು					
1.	ದಕ್ಷಿಣ ಕನ್ನಡ ಜಿಲ್ಲಾ ಬ್ಯಾಂಕು ದಕ್ಷಿಣ ಕನ್ನಡ ಸಸಕಾ ಬ್ರಹ್ಮಾವರ	100.00	04.05.1983	98.87	05.05.1990
2.	ಭಾಗ್ಯಲಕ್ಷ್ಮಿ ಸಸಕಾ	490.00	16.08.2005	262.77	21.01.2001
3.	ಶ್ರೀ ಶ್ರೀರಾಮ ಸಸಕಾ ಚುಂಚನಕಟ್ಟೆ	300.00	28.01.2002	83.18	29.03.2006
		150.00	11.04.2003	107.06	13.04.2004
4.	ಕೃಷ್ಣ ಸಸಕಾ. ಅಥಣಿ	380.00	14.12.2001	18.40	02.01.2008
5.	ನಾರಂಜ ಸಸಕಾ. ಇಮಾಮಂಪುರ	1000.00	23.03.2002	443.97	01.07.2007
6.	ಸೋಮೇಶ್ವರ ಸಸಕಾ. ಬೈಲಹೊಂದಲ	1000.00	29.07.2005	443.97	01.04.2007
7.	ಶ್ರೀ ಧನಲಕ್ಷ್ಮಿ ಸಸಕಾ. ರಾಮದುರ್ಗ	1100.00	11.07.2006	455.70	31.03.2007
8.	ಮಲಪ್ರಭಾ ಸಸಕಾ. ಎಂ.ಹುಬ್ಬಳ್ಳಿ	78.85	15.11.2003	49.69	01.10.2005
9.	ಮಾರ್ಕಂಡೇಯ ಶುಗರ್ಸ್ ಕಾಕತಿ	400.00	16.08.2007	40.00	01.10.2008
	ಉಪಮೊತ್ತ	4898.85		1809.65	
ಸಹಕಾರೇತರ ಸಕ್ಕರೆ ಕಾರ್ಖಾನೆಗಳು					
10.	ಮೈಸೂರು ಶುಗರ್ ಕಂಪನಿ ನಿಯುತ, ಮಂಡ್ಯ	950.00	14.11.2003	950.00	02.04.2004
11.	ಧ್ಯಾನಯೋಗಿ ಶ್ರೀ ಶಿವಕುಮಾರ ಸ್ವಾಮೀಜಿ ಶುಗರ್ಸ್	500.00	31.10.2002	267.35	31.03.2006
12.	ಬಾದಾಮಿ ಶುಗರ್ಸ್ ನಿ.	1250.00	30.04.2007	374.50	01.07.2007

13.	ಬೀಳಗಿ ಶುಗರ್ಸ್ ನಿ.	1732.59	17.10.2006	260.55	01.07.2008
14.	ಭವಾನಿ ಖಂಡಸಾರಿ ಶುಗರ್ಸ್	304.00	20.12.2006	300.11	31.12.2005
15.	ನಿರಾಣಿ ಶುಗರ್ಸ್ ನಿ., ಮುಧೋಳ	300.00	19.10.2006	85.05	12.11.2008
	ಉಪಮೊತ್ತ	**5636.59**		**2237.56**	
	ಒಟ್ಟು ಮೊತ್ತ (ಅವಧಿ ಸಾಲ)	**10635.44**		**40.47.21**	
	ಅಂತಿಮ ಮೊತ್ತ (ಅವಧಿ ಸಾಲ + ನಗದು ಸಾಲ)	**22591.49**		**10887.68**	

ಶ್ರೀ ಸಿ.ಎಸ್.ಪುಟ್ಟೇಗೌಡ : ಉತ್ತರದಲ್ಲಿ ಇವರೇ ಹೇಳಿರುವ ಹಾಗೆ ಸುಮಾರು 684 ಕೋಟಿ ರೂಪಾಯಿಗಳ ಸಾಲವನ್ನು ಪಡೆದಿರುವ ಸುಸ್ತಿದಾರರಿದ್ದಾರೆ. ಈ ವಿಧಾನಸೌಧದಲ್ಲಿ ಬಹಳ ಜನ ಸಹಕಾರಿ ಧುರೀಣರು ರಾಜಕೀಯದಲ್ಲಿ ಪಾಲ್ಗೊಂಡಿದ್ದಾರೆ, ಅನೇಕ ಉದ್ದಿಮೆಗಳನ್ನು ಮಾಡಿದ್ದಾರೆ. ಇಂಥ ದೊಡ್ಡದೊಡ್ಡವರ 684 ಕೋಟಿ ರೂಪಾಯಿಗಳನ್ನು ಬಿಟ್ಟು, ಯಾರೋ ಬಡವರು P.L.D. ಬ್ಯಾಂಕಿನಲ್ಲೋ ಅಥವಾ D.C.C. ಬ್ಯಾಂಕಿನಲ್ಲೋ 5,000 ರೂಪಾಯಿಗಳ ಸಾಲವನ್ನು ಕಟ್ಟದಿದ್ದರೆ ಅವರ ಮನೆಗಳಿಗೆ ಹೋಗಿ ತಟ್ಟೆ ಚೆಂಬುಗಳನ್ನೆಲ್ಲಾ ತುಂಬಿಕೊಂಡು ಬರುತ್ತೀರಿ. ನೀವೇ ಅಪೆಕ್ಸ್ ಬ್ಯಾಂಕಿನ ಉಪಾಧ್ಯಕ್ಷರಾಗಿದ್ದೂ ಈ ರೀತಿ 684 ಕೋಟಿ ರೂಪಾಯಿಗಳ ಬಾಕಿಯನ್ನು ಹೇಗೆ ಬಿಟ್ಟುಕೊಂಡಿದ್ದೀರಿ? ಬಡವರ ಸಾಲವಾದರೆ ಜಪ್ತಿ ಮಾಡಿ ತೆಗೆದುಕೊಂಡು ಬರುತ್ತೀರಿ. ಈ 684 ಕೋಟಿ ಸಾಲ ಯಾರದ್ದು? ಇವರೇನು ಒಪ್ಪತ್ತಿನ ಗರೀಬರೇ ಅಥವಾ ನ್ಯಾಯಬೆಲೆ ಅಂಗಡಿಯ ಅಕ್ಕಿಯನ್ನು ತೆಗೆದುಕೊಂಡು ಹೋಗಿ ಊಟ ಮಾಡುವಂಥವರದ್ದೇ ಈ ಸಾಲ ಎನ್ನುವುದನ್ನು ದಯಮಾಡಿ ಸಹಕಾರಿ ಸಚಿವರು ಹೇಳಬೇಕು. ತಮಿಳುನಾಡು ರಾಜ್ಯದ ಹೊಸೂರಿನಲ್ಲಿ ಉದ್ಯಮ ಮಾಡುತ್ತೇನೆ ಎನ್ನುವ ರಮಣರೆಡ್ಡಿ ಎನ್ನುವವರಿಗೆ ನೀವು ಸಾಲವನ್ನು ಕೊಟ್ಟಿದ್ದೀರಿ. ದಯಮಾಡಿ ಇದನ್ನು ಗಂಭೀರವಾಗಿ ತೆಗೆದು ಕೊಳ್ಳಬೇಕು. ಏಕೆಂದರೆ, ನಮ್ಮ ಜನಗಳಿಗೆ ಏನು ಭಾವನೆ ಬಂದಿದೆ ಎಂದರೆ, ಸಹಕಾರಿ ರಂಗದಲ್ಲಿ ಬಡವರ್ಯಾರಿಗೂ ಸಾಲ ಕೊಡುವುದಿಲ್ಲ, P.L.D. ಬ್ಯಾಂಕ್ ಆಗಲೇ ಅಥವಾ ಇನ್ಯಾವುದೇ ಸಹಕಾರಿ ಸಂಘಗಳಲ್ಲಿ ಸಹಕಾರಿ ಸದಸ್ಯರಾಗಿರುವವರನ್ನು ಬಿಟ್ಟು ಬೇರೆ ಯಾರೂ enter ಆಗುವುದಕ್ಕೇ ಬಿಡುವುದಿಲ್ಲ. ಆದರೆ ಇಷ್ಟೆಲ್ಲಾ ಕೋಟ್ಯಾಂತರ ರೂಪಾಯಿಗಳನ್ನು ಸಾಲ ಉಳಿಸಿಕೊಂಡು ಸುಸ್ತಿ ಮಾಡಿದರೆ ಹೇಗೆ? ಇವರ ಸಾಲವನ್ನೇನು ಬಡವರು ಎಂದು ಬಿಟ್ಟಿರುವಿರಾ? ಅಥವಾ ಪರವಾಗಿಲ್ಲ, ಇವರು ದೊಡ್ಡವರು, ಇವರದ್ದು ಇದ್ದರೂ ಇರಲಿ, ಬಡವರದ್ದು ತಟ್ಟೆ

ಚೆಂಬುಗಳನ್ನು ಹೊರಕ್ಕೆ ಹಾಕೋಣ ಎಂದು ಮಾಡಿರುವಿರಾ? ಬರವರು ತಮ್ಮ ಮಾನ ಕಾಪಾಡಿಕೊಳ್ಳುವುದಕ್ಕೋಸ್ಕರ ಜೀವ ಕಳೆದುಕೊಳ್ಳುತ್ತಾರೆ. ಸತ್ತವರಿಗೆ ಆಮೇಲೆ ಪರಿಹಾರ ಕೊಡುವುದು ಆಗುತ್ತಿದೆ. ಇದು ಯಾವ ನ್ಯಾಯ ಸ್ವಾಮಿ? ನೀವೇ ಇದಕ್ಕೆ ಉಪಾಧ್ಯಕ್ಷರಿದ್ದೀರಿ, ಈ ಸಾಲಗಳನ್ನು ಏಕೆ ಬಿಟ್ಟುಕೊಂಡಿದ್ದೀರಿ ಎನ್ನುವುದನ್ನು ದಯಮಾಡಿ ಹೇಳಬೇಕು?

ಶ್ರೀ ಹೆಚ್.ಡಿ.ರೇವಣ್ಣ : ರಾಜ್ಯದಲ್ಲಿ ಸಹಕಾರಿ ಸಂಘದ ಸದಸ್ಯರು ಅಥವಾ ಅಧ್ಯಕ್ಷರು ತಪ್ಪು ಮಾಡಿದರೆ ನೀವು ಏನು ಕ್ರಮ ತೆಗೆದುಕೊಳ್ಳುತ್ತೀರಿ? 64 ಮಾಡುತ್ತೀರಿ, 68 ಮಾಡುತ್ತೀರಿ. ರಾಜಕೀಯದ ಒತ್ತಡದ ಮೇಲೆ ಮಾಡುತ್ತೀರಿ ಎಂದು ನಾನು ಹೇಳಬೇಕಾಗಿಲ್ಲ. ಈಗಾಗಲೇ ನನ್ನ ಮೇಲೆಯೇ 22 ಜನ ಕಳುಹಿಸಿದ್ದಾರೆ. 22 ಅಲ್ಲ, 42 ಕಳುಹಿಸಲಿ, ಅದಕ್ಕೆ ನಾನು ತಲೆ ಕೆಡಿಸಿಕೊಳ್ಳುವುದಿಲ್ಲ. ನಮಗೆ ಒಂದೇ ಒಂದು ಉದಾಹರಣೆಯನ್ನು ಕೊಡುತ್ತೇನೆ. ಸಹಕಾರಿ ಮಂತ್ರಿಗಳೇ ಅಪೆಕ್ಸ್ ಬ್ಯಾಂಕಿನ ಉಪಾಧ್ಯಕ್ಷರಾಗಿದ್ದಾರೆ. ಒಬ್ಬರು I.A.S. ಅಧಿಕಾರಿ, ಆಪೆಕ್ಸ್ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರು, ಅಪೆಕ್ಸ್ ಬ್ಯಾಂಕಿನಲ್ಲಿ . . .

ಶ್ರೀ ಬಸವರಾಜ ಬೊಮ್ಮಾಯಿ : ರಾಜಕೀಯ ಒತ್ತಡ ಎಂದು ಹೇಳಿದಿರಿ. ರಾಜಕೀಯ ಮತ್ತು ಒತ್ತಡ ಇದರಲ್ಲಿ ನಿಮಗಿಂತ ಮಿಗಿಲಾಗಿ ಯಾರಾದರೂ ಇದ್ದಾರೆಯೇ?

ಶ್ರೀ ಹೆಚ್.ಡಿ.ರೇವಣ್ಣ : ಸಹಕಾರಿ ಸಚಿವರು ಉತ್ತರ ಕೊಡಲು ರೆಡಿ ಇದ್ದಾರೆ, ನೀವು ಏಕೆ ತಲೆಕೆಡಿಸಿಕೊಳ್ಳುತ್ತೀರಿ? ನೀವು ಆರಾಮವಾಗಿರಿ. ನೀವು ನೀರಾವರಿ ಸಚಿವರು. ನೀರಾವರಿ ವಿಷಯಕ್ಕೆ ಬಂದಾಗ ಹೇಳೋಣ.

ಶ್ರೀ ಬಸವರಾಜ ಬೊಮ್ಮಾಯಿ : ನಾನು ವಿಷಯದ ಬಗ್ಗೆ ಮಾತನಾಡುತ್ತಿಲ್ಲ. ರಾಜಕೀಯ ಒತ್ತಡ ಎಂದು ಹೇಳಿದಿರಲ್ಲ, ರಾಜಕೀಯ ಮತ್ತು ಒತ್ತಡದಲ್ಲಿ ನಿಮಗಿಂತ ಮಿಗಿಲಾಗಿ ಯಾರಾದರೂ ಇದ್ದಾರೆಯೇ ಎಂದು ಹೇಳಿದೆ.

ಶ್ರೀ ಹೆಚ್.ಡಿ.ರೇವಣ್ಣ : ಅಪೆಕ್ಸ್ ಬ್ಯಾಂಕಿನಲ್ಲಿ ಹೆಚ್.ಪಿ.ರಾಮರೆಡ್ಡಿ ಎನ್ನುವವರಿಗೆ ಹೊಸೂರಿನಲ್ಲಿ ಉದ್ಯಮ ಮಾಡಲು 25 ಕೋಟಿ ರೂಪಾಯಿಗಳ ಸಾಲವನ್ನು ಕೊಟ್ಟಿದ್ದಾರೆ. ನಬಾರ್ಡ್ ಗೈಡ್‌ಲೈನ್ಸ್ ಪ್ರಕಾರ maximum 33 ಲಕ್ಷ ರೂಪಾಯಿಗಳ ಮೇಲೆ ಸಾಲ ಕೊಡುವುದಕ್ಕೆ ಅಪೆಕ್ಸ್ ಬ್ಯಾಂಕಿನಲ್ಲಿ ಅವಕಾಶವಿಲ್ಲ. ಆದರೆ ಅವರಿಗೆ 25 ಕೋಟಿ ರೂಪಾಯಿಗಳ ಸಾಲವನ್ನು ಕೊಡುತ್ತಾರೆ. ಅಪೆಕ್ಸ್ ಬ್ಯಾಂಕ್ M.D. ಯಾಗಿದ್ದಾಗ 25 ಕೋಟಿ ರೂಪಾಯಿಗಳ ಸಾಲವನ್ನು ಕೊಡುತ್ತಾರೆ. ನಂತರ ಅವರೇ ಅಹಕಾರ ಇಲಾಖೆಯ ಕಾರ್ಯದರ್ಶಿಯಾಗಿ ಇದಕ್ಕೆ exempltion ಕೊಡುತ್ತಾರೆ. ಏನೆಂದು exemption ಕೊಡುತ್ತಾರೆ ಎನ್ನುವುದನ್ನು ಓದಿ ಸಭೆಯ ಗಮನಕ್ಕೆ ತರುತ್ತೇನೆ.

ಅಧ್ಯಕ್ಷರು : ಇದು question hour. ಅಷ್ಟೆಲ್ಲಾ ದೀರ್ಘವಾಗಿ ಬೇಡ.

ಶ್ರೀ ಹೆಚ್.ಡಿ.ರೇವಣ್ಣ : ನಮ್ಮ ರಾಜ್ಯದವರು ಯಾರಾದರೂ ಸಾಲ ಕೇಳುವುದಕ್ಕೆ ಹೋದರೆ ಅದು ಇಡಿ, ಇದು ಇಡಿ ಎಂದು ಸುಮಾರು 50 conditionಗಳನ್ನು ಹಾಕುತ್ತಾರೆ. ಹೊಸೂರಿನ ರಾಮರೆಡ್ಡಿ ಎನ್ನುವವರಿಗೆ ಸಾಲ ಕೊಡುತ್ತಾರೆ. ನಮ್ಮ ರಾಜ್ಯದಿಂದ ಹೊರಗಡೆಗೆ ಸಾಲ ಕೊಡಲು ಅವಕಾಶ ಇದೆಯೇ ಎಂದು ನಾನು ಸಹಕಾರಿ ಸಚಿವರನ್ನು ಕೇಳುತ್ತೇನೆ. Maximum 33 ಲಕ್ಷ ಎಂದು ನಬಾರ್ಡ್ ಗೈಡ್‌ಲೈನ್ಸ್ ಇದ್ದರೂ ಕೂಡ 25 ಕೋಟಿ ರೂಪಾಯಿಗಳ ಸಾಲವನ್ನು ಯಾವ ಆಧಾರದ ಮೇಲೆ ಕೊಟ್ಟರು? ನಂತರ ಅವರೇ ಸಹಕಾರ ಇಲಾಖೆಯ ಕಾರ್ಯದರ್ಶಿಗಳಾಗಿ 25 ಕೋಟಿ ರೂಪಾಯಿಗಳ ಸಾಲಕ್ಕೆ one time permission ಕೊಡುತ್ತೇವೆ ಎಂದು ಕಾಗದವನ್ನು ಕೊಡುತ್ತಾರೆ. ಈ ಕಡೆ ಅಪೆಕ್ಸ್ ಬ್ಯಾಂಕಿನ M.D. ಯಾಗಿದ್ದಂಥವರು, ಆ ಕಡೆ ಸಹಕಾರಿ ಇಲಾಖೆಯ ಕಾರ್ಯದರ್ಶಿಯಾಗಿ permission ಕೊಡುತ್ತಾರಲ್ಲ. ಇವರ ಮೇಲೆ criminal case ಹಾಕುವಿರಾ ಏನು ಎನ್ನುವುದನ್ನು ಸಹಕಾರಿ ಸಚಿವರನ್ನು ಕೇಳುತ್ತೇನೆ.

ಶ್ರೀ ಲಕ್ಷ್ಮಣ ಸವದಿ :- ಸನ್ಮಾನ್ಯ ಅಧ್ಯಕ್ಷರೆ, ಹಿರಿಯ ಶಾಸಕರಾದ ಮಾನ್ಯ ಪುಟ್ಟೇಗೌಡರು ಈ ರಾಜ್ಯದಲ್ಲಿ ಇರತಕ್ಕಂಥ ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ಮತ್ತು ಸಹಕಾರಿಯೇತರ ಸಕ್ಕರೆ ಕಾರ್ಖಾನೆಗಳಿಗೆ ಎಷ್ಟೆಷ್ಟು ಸಾಲವನ್ನು ನೀವು ಅಪೆಕ್ಸ್ ಬ್ಯಾಂಕಿನಿಂದ ಕೊಟ್ಟಿದ್ದೀರಿ ಎನ್ನತಕ್ಕಂಥ ಮೂಲ ಪ್ರಶ್ನೆಯನ್ನು ಕೇಳಿದ್ದಾರೆ. ಬಹುಶಃ ವಿವರವಾದಂತಹ ಮಾಹಿತಿಯನ್ನೂ ಕೂಡ ನಾನು ಒದಗಿಸಿದ್ದೇನೆ. ಸಹಕಾರಿ ಮತ್ತು ಸಹಕಾಯೇತರದಲ್ಲಿ ಇರತಕ್ಕಂಥ ಸಕ್ಕರೆ ಕಾರ್ಖಾನೆಗಳ ಬಗ್ಗೆ ಮಾಹಿತಿ ನೀಡಿದ್ದೇನೆ. ಸಹಕಾ ಕ್ಷೇತ್ರದಲ್ಲಿ ಇರತಕ್ಕಂಥ ಸಕ್ಕರೆ ಕಾರ್ಖಾನೆಗಳು ಇರಬಹುದು, ಮತ್ತು ಸಹಕಾರಿಯೇತರ ಕ್ಷೇತ್ರದಲ್ಲಿ ಇರತಕ್ಕಂಥ ಸಕ್ಕರೆ ಕಾರ್ಖಾನೆಗಳಿಂದ ಬರತಕ್ಕಂಥ ಬಾಕಿ ಬಹಳಷ್ಟು ಇದೆ, ಆ ಬಾಕಿ ಬಗ್ಗೆ ನಿಮ್ಮ ಗಮನ ಹರಿಸಿದ್ದೀರಾ? ಎಂಬುದನ್ನು ಅವರು ಕೇಳುತ್ತಿದ್ದಾರೆ. ಸುಮಾರು ವರ್ಷಗಳಿಂದ ಸಕ್ಕರೆ ಬೆಲೆ ಕುಸಿದಿರುವುದರಿಂದ, ಬಹುಶಃ ಈ ರಾಜ್ಯದಲ್ಲಿ ಇರತಕ್ಕಂಥ ಎಲ್ಲಾಸಕ್ಕರೆ ಕಾರ್ಖಾನೆಗಳು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿವೆ. ಬಹುಶಃ ಈ ವರ್ಷದಿಂದ ಒಳ್ಳೆಯ ಉತ್ತಮ ಸ್ಥಿತಿ ನಿರ್ಮಾಣವಾಗಿದೆ. ಸಕ್ಕರೆ ಕಾರ್ಖಾನೆಗಳು ದೊಡ್ಡವರು ಎನ್ನತಕ್ಕಂಥ ದಿಸೆಯನ್ನು ಇಟ್ಟುಕೊಂಡು ನಾವು ಸಾಲವನ್ನು ಕೊಡಲಿಲ್ಲ. ಈ ರಾಜ್ಯದಲ್ಲಿ ಇರತಕ್ಕಂಥ ಕಬ್ಬು ಬೆಳೆಗಾರರ ರಕ್ಷಣೆ ಆಗಬೇಕು, ಕಬ್ಬು ಬೆಳೆಗಾರ ಸ್ವತಂತ್ರವಾಗಿ ತನ್ನ ಕಾಲ ಮೇಲೆ ತಾನು ಬದುಕಬೇಕು ಎನ್ನತಕ್ಕಂಥ ಸದುದ್ದೇಶದಿಂದ ಸಕ್ಕರೆ ಕಾರ್ಖಾನೆಗಳಿಗೆ ಅಪೆಕ್ಸ್ ಬ್ಯಾಂಕಿನಿಂದ ಮತ್ತು ಅನೇಕ ಅಂಫ ಸಂಸ್ಥೆಗಳಿಂದ ಸಾಲ ಕೊಡಲಾಗಿದೆ. ಆ ಸಕ್ಕರೆ ಕಾರ್ಖಾನೆಗಳಿಗೆ ಇವತ್ತು ನಾವು ಅಪೆಕ್ಸ್ ಬ್ಯಾಂಕಿನಿಂದ ಮತ್ತು ಇನ್ನಿತರ ಸಹಕಾರಿ ಸಂಘಗಳಿಂದ ನಾವು ಸಾಲ ಕೊಡದೇ ಹೋಗಿದ್ದರೆ, ಇವತ್ತು ಈ ರಾಜ್ಯದಲ್ಲಿ ಇರತಕ್ಕಂಥ ರೈತ ಬೀದಿಪಾಲಾಗ ಬೇಕಾಗುತ್ತಿತ್ತು. ಆ ಕಬ್ಬು ಬೆಳೇಗಾರರನ್ನು ರಕ್ಷಣೆ

ಮಾಡಲಿಕ್ಕೆ, ಕಬ್ಬು ಬೆಳೆಗಾರರ ಹಿತವನ್ನು ಕಾಪಾಡಬೇಕೆಂಬ ಸದುದ್ದೇಶದಿಂದ ಅನೇಕ ಸಕ್ಕರೆ ಕಾರ್ಖಾನೆಗಳಿಗೆ ನಾವು ಸಾಲವನ್ನು ಕೊಟ್ಟಿದ್ದೇವೆ. ತಾವು ಅನೇಕ ಉಪ ಪ್ರಶ್ನೆಗಳನ್ನೂ ಸಹ ಕೇಳಿದ್ದೀರಿ. ಆ ಸಕ್ಕರೆ ಕಾರ್ಖಾನೆಗಳಲ್ಲಿ ಇರತಕ್ಕಂಥ ಆಡಳಿತ ಮಂಡಳಿಯವರು ಮತ್ತು ಅಪೆಕ್ಸ್ ಬ್ಯಾಂಕಿನಲ್ಲಿ ಇರತಕ್ಕಂಥ ಆಡಳಿತ ಮಂಡಳಿಯ ಸಂಬಂಧಿಕರು ಯಾರಾದರೂ ಇದ್ದಾರೆಯೇ? ಹೇಗೆ? ಎಂದು ಕೇಳಿದ್ದೀರಿ. ನಾವು ಸಕ್ಕರೆ ಕಾರ್ಖಾನೆಗಳಲ್ಲಿ ಮತ್ತು ಅಪೆಕ್ಸ್ ಬ್ಯಾಂಕಿನ ಆಡಳಿತ ಮಂಡಳಿಯಲ್ಲಿ ಇರತಕ್ಕಂಥ ಸದಸ್ಯರ ಸಂಬಂಧಿಕರಿಗೆ ನಾವು ಯಾವುದೇ ಸಾಲ ಕೊಟ್ಟಿಲ್ಲ. ತಾವೇನು ಒಂದು ಪ್ರಶ್ನೆಯನ್ನು ಪ್ರಸ್ತಾಪಿಸಿದ್ದೀರಿ, ಅದರ ಬಗ್ಗೆ ನಾನು ಮಾಹಿತಿ ತರಿಸಿಕೊಳ್ಳುತ್ತೇನೆ. ತಮಿಳುನಾಡಿನ ಒಬ್ಬರಿಗೆ 25 ಕೋಟಿ ರೂ. ಗಳ ಸಾಲವನ್ನು ಕೊಟ್ಟಿದ್ದಾರೆ ಎಂಬ ಅಂಶವನ್ನು ನನ್ನ ಗಮನಕ್ಕೆ ತಂದಿದ್ದೀರಿ. ಆ ಬಗ್ಗೆ ಮಾಹಿತಿಯನ್ನು ತರಿಸಿಕೊಂಡು, ಕಾನೂನಿನ ಚೌಕಟ್ಟಿನಲ್ಲಿ ಏನೊಂದು ಕ್ರಮವನ್ನು ತೆಗೆದುಕೊಳ್ಳಬೇಕೋ, ಆ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ನಾವು ಸಿದ್ದರಿದ್ದೇವೆ.

ಅಧ್ಯಕ್ಷರು :– ಮುಂದಿನ ಪ್ರಶ್ನೆ ಮಾನ್ಯ ನರೇಂದ್ರಬಾಬು ಅವರದ್ದು.

ಶ್ರೀ ನೆ.ಲ.ನರೇಂದ್ರ :– ಮಾನ್ಯ ಅಧ್ಯಕ್ಷರೆ, ಸಹಕಾರ ಇಲಾಖೆಗೆ ಸಂಬಂಧಪಟ್ಟಂತೆ ನಾನು ಇದೇ ಪ್ರಶ್ನೆಯನ್ನೇ ಕೇಳಿದ್ದೆ. ಆದರೆ ಆ ಪ್ರಶ್ನೆಯೇ ಕಾಣೆಯಾಗಿದೆ. ಆ ಪ್ರಶ್ನೆ starredನಲ್ಲೂ ಇಲ್ಲ, un-starredನಲ್ಲೂ ಇಲ್ಲ. 25 ಕೋಟಿ ರೂ.ಗಲ ಸಾಲ ಹೇಗೆ ಕೊಟ್ಟರು? ಎಂಬ ಪ್ರಶ್ನೆಯನ್ನು ನಾನೂ ಸಹಾ ಹಾಕಿದ್ದೆ. ಆ ಪ್ರಶ್ನೆ ಎಲ್ಲಿ ಕಾಣೆಯಾಯಿತು? ಎಂಬ ಬಗ್ಗೆ ತಾವು ದಯವಿಟ್ಟು ನೋಡಬೇಕು.

ಅಧ್ಯಕ್ಷರು :– ಆ ಬಗ್ಗೆ ಮಾಹಿತಿ ಕಳುಹಿಸಿಕೊಡಿ. ಆ ಬಗ್ಗೆ ನಾನು ವಿಚಾರ ಮಾಡುತ್ತೇನೆ..

ಶ್ರೀ ಸಿ.ಎಸ್.ಪುಟ್ಟೇಗೌಡ :– ಸಾಲ ಕೊಟ್ಟಿದ್ದು ಸರಿಯಿಲ್ಲವೆಂದು ನಾವು ಹೇಳುತ್ತಿಲ್ಲ. ಸಾಲ ಕೊಟ್ಟು ಏಕೆ ವಸೂಲಿ ಮಾಡದೇ ಬಿಟ್ಟಿದ್ದೀರಿ ಎಂದು ನಾವು ಕೇಳುತ್ತಿದ್ದೇವೆ. ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ರೈತರಿಗೆ ಏಕೆ ನೀವು ಅಷ್ಟೊಂದು ಉಸಾಬರಿ ತೆಗೆದುಕೊಂಡು ನೋಟೀಸ್ ನೀಡಿ ಸಾಲ ವಸೂಲಿ ಮಾಡುತ್ತೀರಿ. ಸಾಲ ಕೊಟ್ಟಿರುವುದು ತಪ್ಪು ಎಂದು ನಾನು ಹೇಳುತ್ತಿಲ್ಲ. ಉದ್ಯಮ ಬೆಳೆಯಬೇಕಾದರೆ ಸಾಲ ಕೊಡಬೇಕು, ಅಷ್ಟೇ ಜರೂರಾಗಿ, ಶಿಸ್ತಾಗಿ ಆ ಸಾಲವನ್ನು ವಸೂಲು ಮಾಡಬೇಕು. ಆತ್ಮಹತ್ಯೆ ಮಾಡಿಕೊಳ್ಳುವ ಬಡವನಿಗೆ ನೀವ್ಯಾಕೆ ಆ ಮಾತು ಹೇಳುವುದಿಲ್ಲ?

ಶ್ರೀ ಲಕ್ಷ್ಮಣ ಸವದಿ :– ನಮ್ಮ ರೈತ ಆತ್ಮಹತ್ಯೆ ಮಾಡಿಕೊಳ್ಳಬಾರದು ಎಂಬ ಕಾರಣದಿಂದಲೇ, ನಾವು ಮತ್ತು ನೀವು ಇದ್ದಂತಹ ಸಂದರ್ಭದಲ್ಲಿ 25 ಸಾವಿರ ರೂ.ಗಳವರೆಗೆ ಸಾಲ ಮನ್ನಾ ಮಾಡಿದೆವು. ಈಗ ಶೇಕಡ 3ರ ಬಡ್ಡಿ ದರದಲ್ಲಿ ಸಾಲ ಸಹ ಕೊಡುತ್ತಿದ್ದೇವೆ.

[ಮುಂದಲ]

ಶ್ರೀ ಸಿ.ಎಸ್.ಪುಟ್ಟೇಗೌಡ :– ಕರ್ನಾಟಕ ರಾಜ್ಯದವರಾದ ನೀವು ಪಕ್ಕದ ರಾಜ್ಯವಾದ ತಮಿಳುನಾಡಿನ ಹೊಸೂರಿನವರಿಗೆ ಸಾಲ ಕೊಟ್ಟಿದ್ದೀರಲ್ಲಾ?

ಶ್ರೀ ಲಕ್ಷ್ಮಣ ಸವದಿ :– ಆ ಬಗ್ಗೆ ನಾನೂ ವಿವರ ತರಿಸಿಕೊಳ್ಳುತ್ತೇನೆ. ಕಾನೂನಿನ ಚೌಕಟ್ಟಿನಲ್ಲಿ ಆ ಬಗ್ಗೆ ಏನೊಂದು ಕ್ರಮವನ್ನು ತೆಗೆದುಕೊಳ್ಳಬೇಕೋ, ಅದನ್ನು ನಾನು ತೆಗೆದುಕೊಳ್ಳುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ :– ಮಾನ್ಯ ಅಧ್ಯಕ್ಷರೆ, ...

ಅಧ್ಯಕ್ಷರು :– ಮಾನ್ಯ ರೇವಣ್ಣನವರೆ, ಈ ಪ್ರಶ್ನೆ ಚರ್ಚೆ ಸಾಕು. ನಾವು ಮುಂದಿನ ಪ್ರಶ್ನೆಗೆ ಹೋಗೋಣ.

ಶ್ರೀ ಸಿ.ಟಿ.ರವಿ :– ಮಾನ್ಯ ಅಧ್ಯಕ್ಷರೆ, ನೀವು ಸಾಕು ಎಂದರೂ ಅವರು ಬಿಡುವುದಿಲ್ಲ. ನಮ್ಮ ಮಲೆನಾಡಿನಲ್ಲಿ ಜಿಗಣೆ ಎಂದು ಇರುತ್ತದೆ. ಆ ಜಿಗಣೆ ಕಚ್ಚಿಕೊಂಡ ಮೇಲೆ, ಅವು ಎಷ್ಟು ಹೀರಬೇಕೋ, ಅಷ್ಟನ್ನು ಹೀರಿಕೊಂಡೇ ಕೆಳಕ್ಕೆ ಬೀಳುತ್ತವೆ. ಮಾನ್ಯ ರೇವಣ್ಣನವರು ನೀವು ಬೇಡ ಎಂದರೂ ಬಿಡುವವರಲ್ಲ.

ಅಧ್ಯಕ್ಷರು :– ಮಾನ್ಯ ರೇವಣ್ಣನವರೆ,ಅವರಿಗೆ ನಿಮ್ಮ ಮೇಲೆ ಬಹಳ ಪ್ರೀತಿ ಇರುವಂತಿದೆ.

ಶ್ರೀ ಹೆಚ್.ಸಿ.ಬಾಲಕೃಷ್ಣ :– ಜಿಗಣೆ ಕೇವಲ ಮಲೆನಾಡಿನಲ್ಲಿ ಮಾತ್ರವಲ್ಲ. ಜಿಗಣೆ ಎಲ್ಲಾ ಕಡೆ ಇರುತ್ತವೆ.

ಶ್ರೀ ಸಿ.ಟಿ.ರವಿ :– ಮಾನ್ಯ ರೇವಣ್ಣನವರು ಹಿಡಿದ ಪಟ್ಟನ್ನು ಬಿಡುವುದಿಲ್ಲ ಎಂಬುದಕ್ಕಾಗಿ ನಾನು ಆ ಮಾತನ್ನು ಪ್ರೀತಿಯಿಂದಲೇ ಹೇಳಿದೆ. ತಮಗೆ ಏನು ಆಗಬೇಕೋ, ಅದನ್ನು ಅವರು ಮಾಡಿಸಿಕೊಂಡೇ ತೀರುತ್ತಾರೆ.

ಶ್ರೀ ಲಕ್ಷ್ಮಣ ಸವದಿ :– ತಮ್ಮ ತಲೆಯಲ್ಲಿ ಯಾವ ಉದ್ದೇಶವನ್ನಿಟ್ಟುಕೊಂಡು ಮಾನ್ಯ ರೇವಣ್ಣ ಮತ್ತು ಇತರರು ಈ ಪ್ರಶ್ನೆಯನ್ನು ಕೇಳಿದರೋ, ಆ ಪ್ರಶ್ನೆಗೆ ಅವರಿಗೆ ಉತ್ತರ ಸಿಕ್ಕಿದೆ. ಆದರೂ ಅವರು ಏಕೆ ತಡಬಡಾಯಿಸುತ್ತಿದ್ದಾರೆ?

ಅಧ್ಯಕ್ಷರು :– ಆಯಿತು, ಮುಂದಿನ ಪ್ರಶ್ನೆಗೆ ಹೋಗೋಣ.

ಶ್ರೀ ಹೆಚ್.ಡಿ.ರೇವಣ್ಣ :– ಒಂದು ನಿಮಿಷ ಮಾತನಾಡುತ್ತೇನೆ. ಸಹಕಾರಿ ರಂಗದಲ್ಲಿ ಯಾವುದೇ ಉದ್ದೇಶ ಇಟ್ಟುಕೊಂಡು ನಾನು ಈ ಪ್ರಶ್ನೆಯನ್ನು ಇಲ್ಲಿ ಪ್ರಸ್ತಾಪಿಸುತ್ತಿಲ್ಲ. ಸಕ್ಕರೆ ಕಾರ್ಖಾನೆಗಳೆಲ್ಲಾ ಲಾಸ್ ಆಗಿತ್ತು, ಅದಕ್ಕಾಗಿ 684 ಕೋಟಿ ರೂ.ಗಳಿಗೆ ಸಾಲ ಕೊಟ್ಟಿದ್ದಾಗಿ ತಾವು ಹೇಳಿದಿರಿ. ಮಾನ್ಯ ಸಹಕಾರಿ ಸಚಿವರಿಗೆ ನಾನು ಇಷ್ಟೇ ಪ್ರಶ್ನೆಯನ್ನು ಕೇಳಬಯಸುತ್ತೇನೆ. ಸಕ್ಕರೆ ಕಾರ್ಖಾನೆ ನಡೆಯದೇ, ಕಬ್ಬು ಬರದೇ, ಕಾರ್ಖಾನೆ ನಷ್ಟವಾಗಿದ್ದರೆ ತೊಂದರೆಯೇನಿಲ್ಲ. ಅದರ ಬಗ್ಗೆ ನಾವೇನೂ ಆಕ್ಷೇಪಿಸುವುದಿಲ್ಲ. ನಿಮ್ಮ ಸಹಕಾರಿ ಬ್ಯಾಂಕಿನ ಅಧಿಕಾರಿಗಳು ಕೆಲವು ಸಂಘಗಳಿಗೆ ಸಾಲ ಕೊಡುತ್ತಾರೆ. ಸಾ ಕೊಟ್ಟಮೇಲೆ ರಾಜಕೀಯದ ಗಾಣ ಎಳೆಯುವುದಕ್ಕೋಸ್ಕರ

ನೋಟೀಸ್ ಕೊಡುತ್ತಾರೆ. ಇದೇ ಸಕ್ಕರೆ ಕಾರ್ಖಾನೆಗೆ ನೋಟೀಸ್ ಕೊಟ್ಟಿದ್ದೀರಿ. ನೋಟೀಸ್ ಕೊಟ್ಟ ನಂತರ.....

ಅಧ್ಯಕ್ಷರು :– ಮಾನ್ಯ ರೇವಣ್ಣನವರೆ, ಇದು ಪ್ರಶ್ನೋತ್ತರ.

ಶ್ರೀ ಹೆಚ್.ಡಿ.ರೇವಣ್ಣ :– ಸಾರ್, ಇದು 684 ಕೋಟಿ ರೂ.ಗಳ ದುಡ್ಡಿನ ಪ್ರಶ್ನೆಯಾಗಿದೆ. ಯಾರ ಮನೆ ದುಡ್ಡು ಸಾರ್ ಇದು?

ಅಧ್ಯಕ್ಷರು :– Specific ಆಗಿ ಏನಾದರೂ ಕೇಳುವುದಿದ್ದರೆ ಕೇಳಿ.

ಶ್ರೀ ಹೆಚ್.ಡಿ.ರೇವಣ್ಣ :– ಬೇಕಾದರೆ ಇದರ ಬಗ್ಗೆ ಡೀಟೈಲ್ ಆಗಿ ಚರ್ಚಿಸಲು ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು :– ಅದನ್ನು ಮಾಡೋಣವಂತೆ.

ಶ್ರೀ ಹೆಚ್.ಡಿ.ರೇವಣ್ಣ :– ಸಾರ್, ಇಲ್ಲಿ 684 ಕೋಟಿ ರೂ.ಗಳ ಹಣ ಮರುಪಾವತಿಯಾಗದೆ ಸುಸ್ತಿಯಾಗಿದೆ. ಈ 684 ಕೋಟಿ ರೂ.ಗಳ ಹಣ ನನ್ನದಲ್ಲ. ಸುಸ್ತಿ ಇದೆ ಎಂದು ಅವರೇ ಹೇಳುತ್ತಿದ್ದಾರೆ.

ಶ್ರೀ ಸಿ.ಟಿ.ರವಿ :– ಅದು 684 ಅಲ್ಲ, ಅದು 6840 ಲಕ್ಷ ರೂ.ಗಳಾಗಿದೆ.

ಶ್ರೀ ಹೆಚ್.ಡಿ.ರೇವಣ್ಣ :– ಮಾನ್ಯ ರವಿಯವರೆ, ನೀವು ಸ್ವಲ್ಪ ಸರಿಯಾಗಿ ಓದಿ. ಅದು 684 ಕೋಟಿ ರೂ.ಗಳು.

ಶ್ರೀ ಲಕ್ಷ್ಮಣ ಸವದಿ :– 670 ಕೋಟಿ ರೂ.ಗಳ ಸಾಲ ಕೊಟ್ಟಿರತಕ್ಕದ್ದು ಕೇವಲ ಇವತ್ತಿನ ಜಮಾನದಲ್ಲಲ್ಲ. ಈ ರಾಜ್ಯದಲ್ಲಿ ಸಕ್ಕರೆ ಕಾರ್ಖಾನೆಗಳಿಗೆ ಸಹಕಾರಿ ಬ್ಯಾಂಕುಗಳಿಂದ ಸಾಲ ಕೊಡತಕ್ಕಂಥ ಪರಂಪರೆ ಇರಲಿಲ್ಲ. ಸನ್ಮಾನ್ಯ ದೇವೇಗೌಡರು ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾಗ, ಮಾನ್ಯ ಎಸ್.ಎಸ್.ಪಾಟೀಲರು ಸಹಕಾರಿ ಸಚಿವರಾಗಿದ್ದಾಗ, ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ಸಾಲವನ್ನು ಕೊಡಬೇಕೆಂಬ ನಿಯಮಾವಳಿ ಪ್ರಾರಂಭವಾಯಿತು. ಅವತ್ತಿನಿಂದ ಇವತ್ತಿನವರೆಗೆ ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ಸಾಲ ಕೊಡುತ್ತಾ ಬಂದಿದ್ದೇವೆ. ಆದರಿಂದ ಒಳ್ಳೆಯದು ಆಗಿದೆಯೇ ಹೊರತಾಗಿ ಕೆಟ್ಟದ್ದೇನೂ ಆಗಿಲ್ಲ, ಆ ಹಣ ಬರುವುದಿಲ್ಲ ಎಂಬ ನಿಮ್ಮ ಕಲ್ಪನೆ ಬಿಟ್ಟುಬಿಡಿ. ಇವತ್ತು ಸಹಕಾರಿ ಕ್ಷೇತ್ರದಲ್ಲಿ ಬರತಕ್ಕಂಥ ಬಹಳಷ್ಟು ಸಕ್ಕರೆ ಕಾರ್ಖಾನೆಗಳು ಇರಬಹುದು ಅಥವಾ ಖಾಸಗಿ ಸಕ್ಕರೆ ಕಾರ್ಖಾನೆಗಳಿರಬಹುದು, ಅವುಗಳಿಂದ ಬಾಕಿ ಇರತಕ್ಕದ್ದು ಯಾವ ಕಾಲಕ್ಕೂ ನಿಲ್ಲುವುದಿಲ್ಲ. ಮುಂದಿನ ದಿನಮಾನಗಳಲ್ಲಿ ಸಕ್ಕರೆ ಕಾರ್ಖಾನೆಗಳಿಂದ ಬರಬೇಕಾಗಿರುವ ಬಾಕಿ ಹಣ ಖಂಡಿತವಾಗಿಯೂ ಕೂಡ ಅಪೆಕ್ಸ್ ಬ್ಯಾಂಕಿಗೆ ಬರುತ್ತದೆಂಬ ಆಶಾಭಾವನೆ ನಮ್ಮಲಿದೆ. ಏಕೆಂದರೆ, ರಾಜ್ಯದಲ್ಲಿ ಇವತ್ತಿನ ದಿವಸ ಸಕ್ಕರೆ ಕಾರ್ಖಾನೆಗಳು ಬಹಳ ಉತ್ತಮ ರೀತಿಯಿಂದ ಪ್ರಾರಂಭವಾಗಿವೆ. ಸಕ್ಕರೆ ಧಾರಣೆ ಇವತ್ತು ಬಹಳ ಚೆನ್ನಾಗಿರುವುದರಿಂದ ಉತ್ತಮ ಬೆಲೆ ಸಿಗತಕ್ಕಂಥ ಸಂದರ್ಭದಲ್ಲಿ ಸಕ್ಕರೆ ಕಾರ್ಖಾನೆಗಳು ಆ ಬಾಕಿಯನ್ನು ಪಾವತಿ ಮಾಡುತ್ತವೆಂದು ನಾವು ನಿರೀಕ್ಷಿಸಿದ್ದೇವೆ.

[ಗೊಂದಲ]

ಅಧ್ಯಕ್ಷರು :– ಮಾನ್ಯ ನರೇಂದ್ರಬಾಬುರವರ ಮುಂದಿನ ಪ್ರಶ್ನೆಗೆ ಹೋಗೋಣ.

ಶ್ರೀ ಬಸವರಾಜ ಬೊಮ್ಮಾಯಿ :– ಮಾನ್ಯ ಸಹಕಾರಿ ಸಚಿವರು ಪ್ರಶ್ನೆಗೆ ಸುದೀರ್ಘವಾದ ಉತ್ತರ ಕೊಟ್ಟಿದ್ದಾರೆ. ಮಿಕ್ಕ ವಿವರಗಳನ್ನು ನೀವು ಖಾಸಗಿಯಾಗಿ ಭೇಟಿಯಾದಾಗ ಪಡೆದುಕೊಳ್ಳಿ. ನಿಮಗೂ ಅವರಿಗೂ ಬಹಳ ಸಹಕಾರ ಇದೆ.

[ಗೊಂದಲ]

ಶ್ರೀ ಹೆಚ್.ಡಿ.ರೇವಣ್ಣ :– ಮಾನ್ಯ ನೀರಾವರಿ ಸಚಿವರು ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದೀರಿ. ನೀವ್ಯಾಕೆ ಸಹಕಾರಿ ರಂಗಕ್ಕೆ ಬರುತ್ತೀರಿ? ನೀವು ಸ್ವಲ್ಪ ತಾಳ್ಮೆಯಿಂದ ಇರಿ.

[ಗೊಂದಲ]

ಶ್ರೀ ಸಿ.ಎಂ.ಉದಾಸಿ :– ಪ್ರಶ್ನೆ ಕೇಳಿದವರು ಸುಮ್ಮನೆ ಕುಳಿತಿದ್ದಾರೆ. ಅವರಿಗಿಂತ ಇವರೇ ಹೆಚ್ಚು ಉಪ ಪ್ರಶ್ನೆಗಳನ್ನು ಕೇಳುತ್ತಿದ್ದಾರೆ. ಇದ್ಯಾವ ನ್ಯಾಯ?

ಶ್ರೀ ಉಮೇಶ್ ವಿ.ಕತ್ತಿ :– ಮಾನ್ಯ ಅಧ್ಯಕ್ಷರೂ ಕೂಡ ಇದನ್ನು allow ಮಾಡುತ್ತಿದ್ದಾರಲ್ಲಾ?

[ಗೊಂದಲ]

ಶ್ರೀ ಸಿ.ಎಸ್.ಪುಟ್ಟೇಗೌಡ :– ಮಾನ್ಯ ಉಮೇಶ್ ಕತ್ತಿಯವರು, ಮಾನ್ಯ ಉದಾಸಿಯವರು ಮತ್ತು ಮಾನ್ಯ ರೇವಣ್ಣನವರು ಸಹಕಾರಿ ಧುರೀಣರಾಗಿದ್ದಾರೆ. ಇವರು ತಮ್ಮ ಅನುಭವಗಳ ಬಗ್ಗೆ ಸದನದಲ್ಲಿ ಬೆಳಕನ್ನು ಚೆಲ್ಲಲಿ ಎಂದು ನಾವು ಗಂಭೀರವಾಗಿ ಕುಳಿತು ಕೇಳುತ್ತಿದ್ದೇವೆ. ಕೋಟ್ಯಂತರ ರೂಪಾಯಿಗಳು ಸುಸ್ತಿಯಾಗಿರುವ ಕಥೆಯನ್ನು ನಾವು ಕೇಳಿಲ್ಲ. ನೀವು ಮೂರೂ ಜನ ಪಂಡಿತರಿದ್ದೀರಿ. ನಿಮ್ಮ ಬಾಯಿಂದ ಏನು ಬರುತ್ತದೆಂದು ಕೇಳುವುದಕ್ಕಾಗಿ ನಾವಿಲ್ಲಿ ಸಮಾಧಾನದಿಂದ ಕುಳಿತಿದ್ದೇವೆ.

ಅಧ್ಯಕ್ಷರು :– ಮಾನ್ಯ ಪುಟ್ಟೇಗೌಡರೆ, ಸಾಕು ಬಿಡಿ.

ಶ್ರೀ ಹೆಚ್.ಡಿ.ರೇವಣ್ಣ :– ಮಾನ್ಯ ಅಧ್ಯಕ್ಷರೆ, ಕೊನೆಯದಾಗಿ ನಾನು ಒಂದೇ ಮಾತನ್ನು ಕೇಳಬಯಸುತ್ತೇನೆ.

ಅಧ್ಯಕ್ಷರು :– ಕುಳಿತಿದ್ದ ತಾವು ಮತ್ತೆ ಎದ್ದಿರಲ್ಲಾ?

ಶ್ರೀ ಹೆಚ್.ಡಿ.ರೇವಣ್ಣ :– ಮಾನ್ಯ ಅಧ್ಯಕ್ಷರೆ, 680 ಕೋಟಿ ರೂ.ಗಳ ಸುಸ್ತಿಯಾಗುವುದಕ್ಕೆ ಆಡಳಿತ ಮಂಡಳಿ ಕಾರಣವೋ? ಅಥವಾ ಯಾರಾದರೂ ಅಧಿಕಾರಿಗಳು ಕಾರಣರೋ? 680 ಕೋಟಿ ರೂ.ಗಳು ಸುಸ್ತಿಯಾಗಿರುವುದರಲ್ಲಿ ಏನಾದರೂ ಅವ್ಯವಹಾರ ನಡೆದಿದ್ದರೆ, ಇದರ ಬಗ್ಗೆ ತನಿಖೆ ನಡೆಸಲಿಕ್ಕೆ ಮಾನ್ಯ ಸಚಿವರು ಸಿದ್ದರಿದ್ದಾರೆಯೇ?

ಅಧ್ಯಕ್ಷರು :– ಅದರ ಬಗ್ಗೆ ತಾವು ಪ್ರತ್ಯೇಕವಾದ ಪ್ರಶ್ನೆ ಕೇಳಿ.

ಶ್ರೀ ಲಕ್ಷ್ಮಣ ಸವದಿ :– ನಾನು ಕಾನೂನಿನ ಚೌಕಟ್ಟಿನಲ್ಲಿ ಅದರ ಬಗ್ಗೆ ಏನು ಪರಿಶೀಲನೆ ಮಾಡಬೇಕಾಗಿದೆಯೋ, ಅದನ್ನು ಪರಿಶೀಲನೆ ನಡೆಸುತ್ತೇನೆ. ಪರಿಶೀಲನೆ ನಡೆಸಿ ವರದಿ ಬಂದ ಮೇಲೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಮಹಾಲಕ್ಷ್ಮಿ ಲೇಔಟ್ ಕ್ಷೇತ್ರ ವ್ಯಾಪ್ತಿಯ ಬಿಪಿಎಲ್ ಕಾರ್ಡ್ ಫಲಾನುಭವಿಗಳ ಬಗ್ಗೆ

61(398) ಶ್ರೀ ಎನ್.ಎಲ್.ನರೇಂದ್ರ ಬಾಬು (ಮಹಾಲಕ್ಷ್ಮಿ)

ಶ್ರೀ ಹೆಚ್. ಹಾಲಪ್ಪ. (ಮಾನ್ಯ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಸಚಿವರು)

1) ಮಹಾಲಕ್ಷ್ಮಿ ಬಡಾವಣೆ ವಿಧಾನ ಸಭಾ ಕ್ಷೇತ್ರದಲ್ಲಿ ಗುರುತಿಸಲಾದ ಬಿಪಿಎಲ್ ಕಾರ್ಡು ಫಲಾನುಭವಿಗಳ ಒಟ್ಟು ಸಂಖ್ಯೆ ಎಷ್ಟು;

ಹಾಲಿ13,158 ಬಿಪಿಎಲ್ ಪಡಿತರ ಚೀಟಿಗಳು (1,244 ಅಂತ್ಯೋದಯ ಅನ್ನ ಯೋಜನೆ ಪಡಿತರ ಚೀಟಿಗಳು ಸೇರಿಸಿ) ಚಾಲ್ತಿಯಲ್ಲಿರುತ್ತವೆ. ಇದಲ್ಲದೆ 5,588 ಬಿಪಿಎಲ್ ಫಲಾನುಭವಿಗಳನ್ನು ಹೊಸದಾಗಿ ಸಮೀಕ್ಷೆಯಲ್ಲಿ ಗುರುತಿಸಲಾಗಿದೆ.

2) ಈ ಫಲಾನುಭವಿಗಳನ್ನು ಗುರುತಿಸುವ ಕಾರ್ಯ ಪೂರ್ಣಗೊಂಡಿದೆಯೇ;

ಹೌದು

3) ಈ ಕ್ಷೇತ್ರದಲ್ಲಿ ಫಲಾನುಭವಿಗಳಿಗೆ ನೀಡಿದ ಬಿಪಿಎಲ್ ಕಾರ್ಡುಗಳ ಒಟ್ಟು ಸಂಖ್ಯೆ ಎಷ್ಟು; (ಕುಟುಂಬಗಳ ಸಂಪೂರ್ಣ ವಿಳಾಸ ಒದಗಿಸುವುದು)

ಹಾಲಿ 13,158 ಬಿಪಿಎಲ್ ಪಡಿತರ ಚೀಟಿಗಳು (1,244 ಅಂತ್ಯೋದಯ ಅನ್ನ ಯೋಜನೆ ಪಡಿತರ ಚೀಟಿಗಳು ಸೇರಿಸಿ) ಚಾಲ್ತಿಯಲ್ಲಿರುತ್ತವೆ. ಇದಲ್ಲದೆ 5,588 ಬಿಪಿಎಲ್ ಫಲಾನುಭವಿಗಳನ್ನು ಹೊಸದಾಗಿ ಸಮೀಕ್ಷೆಯಲ್ಲಿ ಗುರುತಿಸಲಾಗಿದೆ. (ಮಾನ್ಯ ಸದಸ್ಯರಿಗೆ ಮಾಹಿತಿಯನ್ನು CD ಯಲ್ಲಿ ಒದಗಿಸಲಾಗಿದೆ)

4) ಬಿಪಿಎಲ್ ಕಾರ್ಡುಗಳ ನೀಡಿಕೆಯಲ್ಲಿ ಅನುಚಿತ ವಿಳಂಬವಾಗಿರುವುದು ನಿಜವೇ;

ಸ್ವಲ್ಪ ವಿಳಂಬವಾಗಿರುವುದು ನಿಜ. ಆದರೆ ಅನುಚಿತ ವಿಳಂಬವಾಗಿರುವುದಿಲ್ಲ.

5) ಹಾಗಿದ್ದಲ್ಲಿ, ಅದಕ್ಕೆ ಕಾರಣಗಳೇನು;

ಅನ್ವಯಿಸುವುದಿಲ್ಲ.

6) ಬಿಪಿಎಲ್ ಕಾರ್ಡುಗಳನ್ನು ನೀಡುವ ಪ್ರಕ್ರಿಯೆ ಯಾವಾಗ ಮುಗಿಯುತ್ತದೆ?

ಇದು ನಿರಂತರ ಪ್ರಕ್ರಿಯೆಯಾಗಿರುತ್ತದೆ.

ಶ್ರೀ ನೆ.ಲ.ನರೇಂದ್ರಬಾಬು :– ಮಾನ್ಯ ಅಧ್ಯಕ್ಷರೆ, ನಾನು ಈ ಸದನದಲ್ಲಿ ಶಾಸಕ ಆಗಿದ್ದಾಗಿನಿಂದ ನೋಡುತ್ತಿದ್ದೇನೆ. ಈ ಪ್ರಶ್ನೆಗೆ ಪ್ರತಿಯೊಂದು ಸಲವೂ ಇದೇ